ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಗೋವಿಂದರಾಜು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:193ಕ್ಕೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಉತ್ತರ:

ಪ್ರಶ್ನೆ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ, ಬೆಂಗಳೂರು ಮಹಾನಗರ ಸಾರಿಗೆ, ವಾಯುವ್ಯ ರಸ್ತೆ ಸಾರಿಗೆ ಹಾಗೂ ಈಶಾನ್ಯ ಸಾರಿಗೆ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ, ಸಿಬ್ಬಂದಿ, ಚಾಲಕರು ಹಾಗೂ ಕಂಡಕ್ಟರ್‌ರವರಿಗೆ ಕಳೆದ ತಿಂಗಳು ಅರ್ಧ ಸಂಬಳವನ್ನು ಮಾತ್ರ ಪಾವತಿಸಿದ್ದು ಹಾಗೂ ನಿವೃತ್ತಿ ಹೊಂದಿದ ನೌಕರರಿಗೂ ಸಹ ನಿವೃತ್ತಿ ಹಣವನ್ನು ಸಹ ಸಕಾಲಕ್ಕೆ ಪಾವತಿಸದೆ ನೌಕರರು ಮತ್ತು ಅವರ ಕುಟುಂಬದವರು ಆರ್ಥಿಕ ಸಂಕಷ್ಟ ಸಿಲುಕಿದ್ದಾರೆ. ಹಾಗೂ ರಾಜ್ಯಾದ್ಯಂತ ಖಾಸಗಿ ವಾಹನಗಳು ಪರವಾನಗಿ ಇಲ್ಲದೆ, ಹಲವರು ಪರವಾನಗಿಗಳನ್ನು ಗ್ರಾಮಾಂತರ ಭಾಗದಲ್ಲಿ ಹೊಂದಿ ರಾಷ್ಟ್ರೀಕರಣ (ರಾಷ್ಟ್ರೀಯ ಹೆದ್ದಾರಿ) ರಸ್ತೆಯಲ್ಲಿ ಚಲಿಸುವುದು ಹಾಗೂ Contract Carriage (ಗುತ್ತಿಗೆ ಸಾಗಣೆ) ಹೆಸರಲ್ಲಿ ಅಕ್ರಮವಾಗಿ ವಾಹನ ಸಂಚರಿಸುತ್ತಿರುವುದರಿಂದ, ಸಂಸ್ಥೆಗೆ ದೊಡ್ಡ ಪ್ರಮಾಣದಲ್ಲಿ ನಷ್ಟ ಆಗುತ್ತಿರುವುದರಿಂದ, ಈ ವಿಷಯವನ್ನು ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಉತ್ತರ:

I.

ಕ.ರಾ.ರ.ಸಾ.ನಿಗಮ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕೋವಿಡ್-19ರ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು ಇತ್ತೀಚಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಸ್ವಲ್ಪ ಮಟ್ಟಿಗೆ ಚೇತರಿಕೆ ಉಂಟಾಗುತ್ತಿದ್ದು, ನಿಗಮದ ಎಲ್ಲಾ ಅಧಿಕಾರಿ , ಸಿಬ್ಬಂದಿ , ಚಾಲಕರು, ಕಂಡಕ್ಟರ್ ಇವರುಗಳಿಗೆ ಜನವರಿ-2022ರ ಮಾಹೆಯವರೆಗೆ ಪೂರ್ಣ ಪ್ರಮಾಣದಲ್ಲಿ ವೇತನವನ್ನು ನೀಡಲಾಗಿದೆ. ಹಾಗೂ ಫೆಬ್ರವರಿ-2022 ಮಾಹೆಯ ವೇತನದ ಶೇಕಡ 50ರಷ್ಟನ್ನು ದಿನಾಂಕ:11.03.2022ರಂದು ಪಾವತಿ ಮಾಡಲಾಗಿದ್ದು, ಬಾಕಿ ಶೇಕಡ 50ರಷ್ಟನ್ನು ದಿನಾಂಕ:25.03.2022 ರಂದು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ನಿಗಮದಲ್ಲಿ ನಿವೃತ್ತರಾದ ಸಿಬ್ಬಂದಿಗಳಿಗೆ ಭವಿಷ್ಯನಿಧಿ, ನಿವೃತ್ತ ಗಳಿಕೆ ರಜೆ ನಗದೀಕರಣ, ಹಾಗೂ ಉಪಧನ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ಫೆಬ್ರವರಿ-2022 ರವರೆಗೆ ನಿವೃತ್ತರಾಗಿರುವ ಅರ್ಹ ಎಲ್ಲಾ ಸಿಬ್ಬಂದಿಗಳಿಗೆ ಭವಿಷ್ಯ ನಿಧಿಯ ಮೊತ್ತವನ್ನು ಪಾವತಿ ಮಾಡಲಾಗಿದೆ .

ನಿವೃತ್ತ ಗಳಿಕೆ ರಜೆ ನಗದೀಕರಣದ ಮೊಬಲಗನ್ನು ಡಿಸಂಬರ್-2021ರ ಮಾಹೆಯವರೆಗೆ ನಿವೃತ್ತರಾಗಿರುವ ಅರ್ಹ ಎಲ್ಲಾ ಸಿಬ್ಬಂದಿಗಳಿಗೆ ಮೊತ್ತವನ್ನು ಪಾವತಿ ಮಾಡಲಾಗಿರುತ್ತದೆ.

ಮುಂದುವರೆದು ಮೇ-2021ರವರೆಗೆ ನಿವೃತ್ತಿ ಹೊಂದಿದ ಎಲ್ಲಾ ಅರ್ಹ ನೌಕರರಿಗೆ ಉಪಧನವನ್ನು ಪಾವತಿ ಮಾಡಲಾಗಿದ್ದು, ಬಾಕಿ ಮೊತ್ತವನ್ನು ಅಂತರಿಕ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಶೀಘ್ರದಲ್ಲಿಯೇ ಪಾವತಿ ಮಾಡಲು ಕ್ರಮ ಜರುಗಿಸಲಾಗುವುದು.

ಬೆಂ.ಮ.ಸಾ.ಸಂಸ್ಥೆ

ಕೋವಿಡ್-19 ವೈರಸ್ ಹರಡುವಿಕೆಯನ್ನು ನಿಯಂತ್ರಿಸುವ ಸಲುವಾಗಿ "ಲಾಕ್

ಡೌನ್'ನಂತಹ ಕ್ರಮವನ್ನು ಜಾರಿಗೊಳಿಸಿದ್ದ ಹಿನ್ನಲೆಯಲ್ಲಿ ಹಾಗೂ ಸದರಿ ರೋಗದಿಂದಾಗಿ ಪ್ರತಿದಿನ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗಿದ್ದರಿಂದ ಸಂಸ್ಥೆಗೆ ಬರಬೇಕಾದ ದಿನಂಪ್ರತಿ ಸಾರಿಗೆ ಆದಾಯದಲ್ಲಿ ಕುಂಠಿತವಾಗಿದ್ದು, ನಗದು ಕೊರತೆಯನ್ನು ಅನುಭವಿಸುತ್ತಿರುವುದರಿಂದ, ಸಿಬ್ಬಂದಿಗಳ ವೇತನ ಪಾವತಿಗೆ 2020-21 ನೇ ಸಾಲಿನಲ್ಲಿ ರೂ.690.55 ಕೋಟಿಗಳನ್ನು ಹಾಗೂ 2021-22 ನೇ ಸಾಲಿನಲ್ಲಿ ರೂ.582.05 ಕೋಟಿಗಳ ವಿಶೇಷ ಸಹಾಯಧನವನ್ನು ಸರ್ಕಾರವು ಬಿಡುಗಡೆ ಮಾಡಿರುತ್ತದೆ.

ಸರ್ಕಾರದ ಸಹಾಯಧನ ಹಾಗೂ ಸಂಸ್ಥೆಯ ಆಂತರಿಕ ಸಂಪನ್ಮೂಲದೊಂದಿಗೆ ಬಾಕಿಯಿದ್ದ ಜನವರಿ-2022 ಹಾಗೂ ಫೆಬ್ರವರಿ-2022ರ ಅರ್ಧ ವೇತನವನ್ನು ದಿನಾಂಕ:19.03.2022 ರಂದು ಹಾಗೂ ದಿನಾಂಕ:21.03.2022 ರಂದು ಕ್ರಮವಾಗಿ ಪಾವತಿ ಮಾಡಲಾಗಿರುತ್ತದೆ. ಪ್ರಸ್ತುತ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಿಬ್ಬಂದಿಗಳಿಗೆ ಯಾವುದೇ ವೇತನ ಬಾಕಿ ಇರುವುದಿಲ್ಲ.

ಮುಂದುವರೆದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನೌಕರರ ಭವಿಷ್ಯ ನಿಧಿ, ಉಪಧನ, ನಿವೃತ್ತ/ ಮರಣಹೊಂದಿದ ನೌಕರರ ಗಳಿಕೆ ರಜೆ ಮರುಪಾವತಿ ಹಾಗೂ ಪೂರೈಕೆದಾರರ ಬಿಲ್ಲುಗಳ ಹಳೆಯ ಬಾಕಿ ತೀರುವಳಿಗಾಗಿ ರೂ.200.00 ಕೋಟಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದಲ್ಲಿ ಸಂಸ್ಥೆಯು ರೂ.100.00 ಕೋಟಿಗಳನ್ನು ಭವಿಷ್ಯ ನಿಧಿ ಪಾವತಿಗೆ, ಮಾರ್ಚ್-2021 ರವರೆಗಿನ ಬಾಬ್ತು ರೂ.20.00 ಕೋಟಿಗಳನ್ನು ನಿವೃತ್ತಿ ಗಳಿಕೆ ರಜೆ (Retired Encashment) ಪಾವತಿಗೆ ಹಾಗೂ ಸೆಪ್ಟಂಬರ್-2021 ರವರೆಗಿನ ಬಾಬ್ತು ರೂ.70.00 ಕೋಟಿ ಮೊತ್ತವನ್ನು ನಿವೃತ್ತಿ ಉಪಧನ (Retired Gratuity) ಪಾವತಿಸಲಾಗಿದೆ.

ವಾ.ಕ.ರ.ಸಾ.ಸಂಸ್ಥೆ

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ/ಅಧಿಕಾರಿಗಳ ವೇತನ ಪಾವತಿಗಾಗಿ ಏಪ್ರಿಲ್-2021 ರಿಂದ ಮಾರ್ಚ್-2022 ಮಾಹೆವರೆಗಿನ ವೇತನ ಪಾವತಿಗಾಗಿ ಸರ್ಕಾರದಿಂದ ರೂ.230.17 ಕೋಟಿ ಅನುದಾವನ್ನು ಬಿಡುಗಡೆ ಮಾಡಿದ್ದು, ಸದರಿ ಅನುದಾನ ಹಾಗೂ ಸಂಸ್ಥೆಯ ಆಂತರಿಕ ಸಂಪನ್ಮೂಲದೊಂದಿಗೆ ಎಲ್ಲಾ ಅರ್ಹ ನೌಕರರಿಗೆ ಫೆಬ್ರುವರಿ-2022ರವರೆಗೆ ಪೂರ್ಣ ವೇತನವನ್ನು ಪಾವತಿಸಲಾಗಿದೆ.

ಸಂಸ್ಥೆಯು ಕಳೆದ ಹಲವಾರು ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿದ್ದು, ದಿನಾಂಕ: 31-03-2021ರ ಅಂತ್ಯಕ್ಕೆ ರೂ.1457.07 ಸಂಚಿತ ನಷ್ಟವನ್ನು ಹೊಂದಿರುವ ಹಿನ್ನೆಲೆಯಲ್ಲಿ ಅಲ್ಲದೇ, ಕೊರೋನಾ ವೈರಸ್ ಸಾಂಕ್ರಾಮಿಕ ಸೋಂಕಿನಿಂದಾಗಿ 'Lockdown' ಘೋಷಿಸಿದ್ದರಿಂದ, ಸಂಸ್ಥೆಯ ಸಾರಿಗೆ ಕಾರ್ಯಾಚರಣೆಯು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ ಸಂಸ್ಥೆಗೆ ಯಾವುದೇ ಆದಾಯ ಬಂದಿರುವುದಿಲ್ಲ. ಅಲ್ಲದೇ 'Lockdown' ತೆರವಿನ ತರುವಾಯವು ಷರತ್ತುಬದ್ಧವಾಗಿ ಕಾರ್ಯಾಚರಣೆಯನ್ನು ನಿರ್ವಹಿಸಿದ್ದರಿಂದ, ನಿರೀಕ್ಷಿತ ಆದಾಯ ಬಂದಿರುವುದಿಲ್ಲ. ಇದರಿಂದಾಗಿ ಸಂಸ್ಥೆಯು ತೀವ್ರ ಆರ್ಥಿಕ ಸಂಕಷ್ಟ ಸ್ಥಿತಿ ಎದುರಿಸುವಂತಾಗಿದೆ ಮತ್ತು ನಿವೃತ್ತ ನೌಕರರಿಗೆ ಪಾವತಿಸಬೇಕಾದ ಉಪಧನ ಹಾಗೂ ರಜೆ ನಗದೀಕರಣ ಮತ್ತು ಹಾಲಿ ನೌಕರರಿಗೆ ಪಾವತಿಸಬೇಕಾದ ಇತರೆ ಆರ್ಥಿಕ ಸೌಲಭ್ಯಗಳನ್ನು ನಿಗದಿತ ಸಮಯದಲ್ಲಿ ಪಾವತಿಸಲು ಸಾಧ್ಯವಾಗುತ್ತಿಲ್ಲ.

ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿಯೂ ಕೂಡ ಡಿಸೆಂಬರ್-2019 ರವರೆಗೆ ನಿವೃತ್ತಿ ಹೊಂದಿದ ಎಲ್ಲಾ ಅಧಿಕಾರಿ/ ನೌಕರರಿಗೆ ಉಪಧನ, ರಜೆ ನಗದೀಕರಣ ಮೊತ್ತ ಪಾವತಿಸಲಾಗಿದೆ. ಭವಿಷ್ಯ ನಿಧಿ ಮತ್ತು ಉಪದಾನ ಬಾಕಿ ಪಾವತಿಗಾಗಿ ರೂ.300.00 ಕೋಟಿ ಬ್ಯಾಂಕ್ ಸಾಲದ ಪ್ರಸ್ತಾವನೆಯು ಸರ್ಕಾರದಿಂದ ಮಂಜೂರಾತಿಗೊಂಡಿದ್ದು, ಬ್ಯಾಂಕಿನಿಂದ ಬಿಡುಗಡೆ ಹಂತದಲ್ಲಿದೆ. ಬಿಡುಗಡೆ ತರುವಾಯ ಸಂಸ್ಥೆಯ ನಿವೃತ್ತ ನೌಕರರಿಗೆ ಪಾವತಿಸಬೇಕಾಗಿರುವ ಆರ್ಥಿಕ ಸೌಲಭ್ಯಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಕ.ಕ.ರ.ಸಾ.ನಿಗಮ

ಕೋವಿಡ್-19 ಹರಡುವಿಕೆಯಿಂದಾಗಿ ಪೂರ್ಣ ಪ್ರಮಾಣದ ಸಾರಿಗೆ ಆದಾಯವು ಬರದೇ ಇರುವುದರಿಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಆರ್ಥಿಕ ಸಂಕಷ್ಟದಲ್ಲಿರುತ್ತದೆ. ಆದುದರಿಂದ, ನಿಗಮದ ಇಂಧನ ಮತ್ತು ಇತರೆ ಪಾವತಿಗಳನ್ನು ತಡೆಹಿಡಿದು ನಿಗಮದ ಸಿಬ್ಬಂದಿಗಳಿಗೆ ಪೂರ್ಣ ಪ್ರಮಾಣದಲ್ಲಿ ಫೆಬ್ರವರಿ-2022ರ ಮಾಹೆಯ ವೇತನವನ್ನು ದಿನಾಂಕ:10.03.2022 ರಂದು ನೀಡಲಾಗಿದ್ದು, ಪ್ರಸ್ತುತ ಯಾವುದೇ ಮಾಹೆಯ ವೇತನ ಪಾವತಿಸುವುದು ಬಾಕಿ ಇರುವುದಿಲ್ಲ.

ಮುಂದುವರೆದು, ನಿಗಮದಲ್ಲಿ ನಿವೃತ್ತಿ ಹೊಂದಿದ ನೌಕರರ ಉಪಧನ ಪಾವತಿಯನ್ನು ಸೆಪ್ಟಂಬರ್-2021 ವರೆಗೆ ಪಾವತಿ ಮಾಡಲಾಗಿರುತ್ತದೆ.

II. ರಾಜ್ಯದ ಗ್ರಾಮಾಂತರ ಭಾಗದಲ್ಲಿ ಮತ್ತು ರಾಷ್ಟ್ರೀಕರಣಗೊಂಡ ರಸ್ತೆಗಳಲ್ಲಿ ರಹದಾರಿ ಹೊಂದಿರುವ ಖಾಸಗಿ Contract Carriage (ಗುತ್ತಿಗೆ ಸಾಗಣೆ) ವಾಹನಗಳು ಸಂಚರಿಸುವುದು ಸಾಮಾನ್ಯವಾಗಿರುತ್ತದೆ. ರಹದಾರಿ ಷರತ್ತಿನಂತೆ ಇಂತಹ ವಾಹನಗಳಿಗೆ ಈ ರಸ್ತೆಗಳಲ್ಲಿ ಸಂಚರಿಸಲು ಅವಕಾಶವಿರುತ್ತದೆ. ಇದರ ಜೊತೆಯಲ್ಲಿಯೇ ಕೆಲವೊಂದು ಖಾಸಗಿ ವಾಹನಗಳು ರಹದಾರಿ ಷರತ್ತು ಉಲ್ಲಂಘನೆ ಮಾಡಿ ಹಾಗೂ ರಹದಾರಿ ಇಲ್ಲದೆ ಇರುವ ವಾಹನಗಳು ರಾಷ್ಟ್ರೀಕರಣಗೊಂಡ ಮಾರ್ಗಗಳಲ್ಲಿ ಸಂಚರಿಸುವುದು ಕಂಡುಬಂದಿರುತ್ತದೆ. ಇಂತಹ ವಾಹನಗಳನ್ನು ಇಲಾಖೆಯ ಪ್ರವರ್ತನ ಸಿಬ್ಬಂದಿಗಳು ಪತ್ತೆಹಚ್ಚಿ ವಾಹನಗಳನ್ನು ಜಪ್ತು ಮಾಡಲು ಮತ್ತು ಇಂತಹ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ಕಾನೂನಿನಂತೆ ಕ್ರಮ ಜರುಗಿಸುವ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ.

ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ನಿರೀಕ್ಷಕರು ಹಾಗೂ ಹಿರಿಯ ಮೋಟಾರು ವಾಹನ ನಿರೀಕ್ಷಕರ ಒಟ್ಟು 644 ಮಂಜೂರಾದ ಹುದ್ದೆಗಳಿದ್ದು, ಅವುಗಳ ಪೈಕಿ ಕೇವಲ 208 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, 436 ಹುದ್ದೆಗಳು ಖಾಲಿ ಇವೆ. ಆದಾಗ್ಯೂ ಲಭ್ಯವಿರುವ ಸದರಿ ಕಾರ್ಯನಿರ್ವಾಹಕ ಸಿಬ್ಬಂದಿಗಳನ್ನು ಬಳಸಿಕೊಂಡು ದೈನಂದಿನದ ಪ್ರವರ್ತನ ಕಾರ್ಯಗಳೊಂದಿಗೆ ರಹದಾರಿ ಇಲ್ಲದೆ ರಾಷ್ಟ್ರೀಕೃತ ಮಾರ್ಗದಲ್ಲಿ ಸಂಚರಿಸುವ ಖಾಸಗಿ ವಾಹನಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಲಾಗುತ್ತಿದ್ದು, ಇದನ್ನು ಮುಂದುವರೆಸಲಾಗುವುದು.

ಸಂಖ್ಯೆ: ಟಿಡಿ 141 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು